# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 560(581) |
| ಉತ್ತರಿಸುವ ದಿನಾಂಕ | : 10.03.2020 |
| ಸದಸ್ಯರ ಹೆಸರು | : ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವವರು | : ಗಣಿ ಮತ್ತು ಭೂವಿಜ್ಞಾನ ಸಚಿವರು |

| ಪ್ರಶ್ನೆ ಸಂಖ್ಯೆ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಜಂತಕಲ್ ಅಕ್ರಮ ಗಣಿಗಾರಿಕೆ ಪ್ರಕರಣ ಕುರಿತು ವಿಶೇಷ ತನಿಖಾ ತಂಡದಿಂದ ಕ್ರಿಮಿನಲ್ ಪ್ರಕರಣ ದಾಖಲಾಗಿರುವ ಎಷ್ಟು ಐ.ಎ.ಎಸ್. ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ; ಈ ಪ್ರಕರಣದಲ್ಲಿ ಭಾಗಿಯಾಗಿರುವ ಐ.ಪಿ.ಎಸ್. ಅಧಿಕಾರಿಗಳ ಸಂಖ್ಯೆ ಎಷ್ಟು; ಇವರ ಮೇಲೆ ಕ್ರಿಮಿನಲ್ ಪ್ರಕರಣ ಯಾವ ದಿನಾಂಕದಂದು ದಾಖಲಾಗಿದೆ; | ಜಂತಕಲ್ ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಶ್ರೀ ಗಂಗಾರಾಂ ಬಡೇರಿಯಾ ಐ.ಎ.ಎಸ್. ಅಂದಿನ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರನ್ನು ವಿಶೇಷ ತನಿಖಾ ತಂಡ, ಕರ್ನಾಟಕ ಲೋಕಾಯುಕ್ತ ಇವರು ದಿನಾಂಕ: 15.05.2017 ರಂದು ಬಂಧಿಸಿದ್ದರ ಹಿನ್ನೆಲೆಯಲ್ಲಿ ಅಧಿಕಾರಿಯವರನ್ನು ದಿನಾಂಕ:19.05.2017 ರಂದು ಅಮಾನತ್ತುಗೊಳಿಸಿ ದಿನಾಂಕ:28.10.2017 ರಲ್ಲಿ ಅಧಿಕಾರಿಯವರನ್ನು ಮತ್ತೆ ಸೇವೆಯಲ್ಲಿ ಪುನರ್ ಸ್ಥಾಪಿಸಲಾಗಿರುತ್ತದೆ.<br>ಸದರಿ ಅಧಿಕಾರಿಯವರ ಮೇಲೆ ದಿನಾಂಕ:13.03.2015 ರಂದು ಮೊಕದ್ದಮೆ ಸಂಖ್ಯೆ: 10/2015 ರನ್ವಯ ಕ್ರಿಮಿನಲ್ ಪ್ರಕರಣ ದಾಖಲಾಗಿರುತ್ತದೆ.<br>ಈ ಪ್ರಕರಣದಲ್ಲಿ ಯಾವುದೇ ಐ.ಪಿ.ಎಸ್. ಅಧಿಕಾರಿಗಳು ಭಾಗಿಯಾಗಿರುವುದಿಲ್ಲ. |
| ಆ) | ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳ ಮೇಲೆ ದಾಖಲಾಗಿರುವ ಕ್ರಿಮಿನಲ್ ಪ್ರಕರಣದ ಕುರಿತು ತನಿಖೆ ನಡೆಸಲು ಅನುಮತಿ ನೀಡಲಾಗಿದೆ; ಅನುಮತಿ ನೀಡುವಂತೆ ಕೋರಿ ವಿಶೇಷ ತನಿಖಾ ತಂಡದಿಂದ ಸರ್ಕಾರಕ್ಕೆ ಎಂದು ಮನವಿ ಸಲ್ಲಿಸಲಾಗಿದೆ; ಇನ್ನು ನೀಡಿಲ್ಲದಿದ್ದಲ್ಲಿ, ಯಾವಾಗ ನೀಡಲಾಗುವುದು; | ಐ.ಎ.ಎಸ್. ಅಧಿಕಾರಿಗಳ ಮೇಲೆ ದಾಖಲಾಗಿರುವ ಕ್ರಿಮಿನಲ್ ಪ್ರಕರಣದ ಕುರಿತು ವಿಶೇಷ ತನಿಖಾ ತಂಡದಿಂದ ತನಿಖೆ ನಡೆಸಲು ಇಲಾಖೆಯು ಅನುಮತಿ ನೀಡಿರುವುದಿಲ್ಲ.<br>ಶ್ರೀ ಗಂಗಾರಾಂ ಬಡೇರಿಯಾ ಐ.ಎ.ಎಸ್. ಅಂದಿನ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ರವರ ವಿರುದ್ಧ ಜಂತಕಲ್ ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ದೋಷರೋಪಣಾ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲು Criminal Procedure Code-1973, Sec-197 ಹಾಗೂ Prevention of Corruption Act-1998, Sec-19 ರ ಪ್ರಕಾರ ಅಭಿಯೋಜನಾ ಮಂಜೂರಾತಿ ಆದೇಶವನ್ನು ನೀಡಬೇಕೆಂದು ವಿಶೇಷ ತನಿಖಾ ತಂಡ, ಕರ್ನಾಟ ಲೋಕಾಯುಕ್ತ ಇವರ ದಿನಾಂಕ: 17.10.2017ರ ಪತ್ರದಲ್ಲಿ ಹಾಗೂ ಪರಿಷ್ಕೃತ ವರದಿ 05.03.2019ರ ಪತ್ರದಲ್ಲಿ ಸಿ.ಆ.ಸಿ.ಇಲಾಖೆಯು ಕೋರಿರುತ್ತದೆ. ಈ ಬಗ್ಗೆ ಆಡಳಿತ ಇಲಾಖೆಯ ನಿರ್ಧಿಷ್ಟ ಅಭಿಪ್ರಾಯದೊಂದಿಗೆ ವರದಿಯನ್ನು ಸಲ್ಲಿಸುವಂತೆ ಸಿ.ಆ.ಸು.ಇಲಾಖೆಯು ಕೋರಿದ್ದು, ಅಭಿಪ್ರಾಯ / ವರದಿಯನ್ನು ಸಲ್ಲಿಸುವುದರ ಬಗ್ಗೆ ಪರಿಶೀಲಿಸಲಾಗುತ್ತಿದೆ. |

| | | |
|---|---|---|
| ಇ) | ಜಂತಕಲ್ ಅಕ್ರಮ ಗಣಿಗಾರಿಕೆ ಪ್ರಕರಣದ ಅಕ್ರಮದಲ್ಲಿ ಭಾಗಿಯಾಗಿರುವ ಐ.ಎ.ಎಸ್ ಮತ್ತು ಐ.ಪಿ.ಎಸ್ ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | ಜಂತಕಲ್ ಅಕ್ರಮ ಗಣಿಗಾರಿಕೆ ಪ್ರಕರಣ ಸಂಬಂಧ ಶ್ರೀ ಗಂಗಾರಾಂ ಬಡೇರಿಯಾ, ಭಾ.ಆ.ಸೇ., ಹಿಂದಿನ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರ ವಿರುದ್ಧ ಈ ಹಿಂದೆ ಸರ್ಕಾರದ ಹಂತದಲ್ಲಿ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಿ ವಿಚಾರಣಾಧಿಕಾರಿಯವರು ದಿನಾಂಕ:21.09.2015 ರಂದು ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ. ಈ ವರದಿಯನ್ನು ಸರ್ಕಾರವು ಅಂಗೀಕರಿಸಿ, ಅಧಿಕಾರಿಯವರನ್ನು ಆರೋಪ ಮುಕ್ತರನ್ನಾಗಿಸಿ ಅವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಮುಕ್ತಾಯಗೊಳಿಸಲು ನಿರ್ಣಯಿಸಿ, ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 538 ಸಿಅಸೆ 2011, ದಿನಾಂಕ:09.02.2017ನ್ನು ಹೊರಡಿಸಲಾಗಿರುತ್ತದೆ. ತದನಂತರ ವಿಶೇಷ ತನಿಖಾ ತಂಡ (Special Investigation Team) ದಿಂದ ಸದರಿ ಅಧಿಕಾರಿಯ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಲಾಗಿದ್ದು, ಸದರಿ ಪ್ರಕರಣ ಪ್ರಗತಿಯಲ್ಲಿದೆ. |
| ಈ) | ಜಂತಕಲ್ ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಅಕ್ರಮವೆಸಗಲು ಐ.ಎ.ಎಸ್. ಅಧಿಕಾರಿಯ ಪುತ್ರನ ಬ್ಯಾಂಕ್ ಖಾತೆಗೆ 20 ಲಕ್ಷ ಪಾವತಿಸಲಾಗಿದೆ ಎಂಬುದರ ಕುರಿತು ಸರ್ಕಾರದ ನಿಲುವೇನು? | ಸದರಿ ಐ.ಎ.ಎಸ್ ಅಧಿಕಾರಿಯ ಪುತ್ರನ ವಿರುದ್ಧ ಮಾನ್ಯ ನ್ಯಾಯಾಲಯದಲ್ಲಿ ಕರ್ನಾಟಕ ಲೋಕಾಯುಕ್ತ, ವಿಶೇಷ ತನಿಖಾ ತಂಡ ಇವರಿಂದ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿರುತ್ತದೆ. |

ಸಂಖ್ಯೆ: ಸಿಐ 13 ಎಂಪಿಪಿ 2020

(ಸಿ.ಸಿ. ಪಾಟೀಲ)
ಗಣಿ ಮತ್ತು ಭೂ ವಿಜ್ಞಾನ ಸಚಿವರು.